# ಸೂಕ್ಷ್ಮ ಸಂವೇದನೆಯ ಗೆಳೆಯ

## – ಅಬ್ದುಲ್ ನಜೀರ್ ಸಾಬ್

ನನಗೆ ಎಸ್. ವೆಂಕಟರಾಮ್‌ರವರು ಹೆಚ್ಚು ಪರಿಚಯ ಇರ್ಲಿಲ್ಲ. ಸಾವಿರದ ಒಂಬೈನೂರ ಐವತ್ತೇಳೋ ಐವತ್ತಾರೋ ನನಗೆ ಸರಿಯಾಗಿ ಜ್ಞಾಪಕ ಇಲ್ಲ. ಮೈಸೂರು ಜಿಲ್ಲೆಯ ಕಾರ್ಮಿಕ ಸಂಘಟನೆಯಲ್ಲಿ ಗೆಳೆಯ ವೇದಾಂತ ಹೆಮ್ಮಿಗೆ ಜೊತೆ ನಾನು ಅವರನ್ನ ನೋಡಿದ್ದೆ. ಅವರೊಡನೆ ನಾನು ವಿಚಾರಗಳನ್ನ ಮಾಡಿದ್ದು, ನಂತರ ಅರವತ್ತೆರಡರಲ್ಲಿ ಲೋಹಿಯಾರವರೊಡನೆ ಒಮ್ಮೆ ದಿಲ್ಲಿಯಲ್ಲಿ ಭೇಟಿಯಾಗಿದ್ದೆ. ಗೆಳೆಯ ಜಾರ್ಜ್‌ರೊಡನೆ ಸ್ವಲ್ಪ ಹೆಚ್ಚು ಸಂಬಂಧ ಇತ್ತು. ತದ ನಂತರ ನಾನು ಹೆಚ್ಚು ನಿಕಟವಾಗಿ ಅವರಿಗೆ ಪರಿಚಯಸ್ಥನಾದದ್ದು ಅಂದರೆ ೭೭ರಲ್ಲಿ ಜನತಾ ಸರ್ಕಾರ ಬಂದ ಮೇಲೆ. ಆಗಾಗ ಜಾರ್ಜ್ ಬಂದಾಗ ನಾವೂ ಊರಿಗೆ ಹೋಗ್ತಾ ಇದ್ವು. ಅಲ್ಲಿ ಕೂತು ಮಾತನಾಡ್ತಾ ಇದ್ವು. ಹೆಚ್ಚು ಸಂಪರ್ಕ ಆದದ್ದು ಅಂದ್ರೆ ಅವರು ಮೇಲ್ಮನೆಗೆ ಬಂದಾಗ. ನಾನು ಮೇಲ್ಮನೆಯಲ್ಲಿದ್ದೆ. ವಿರೋಧ ಪಕ್ಷದಲ್ಲಿದ್ದೆ. ಅವರೂ ಅಲ್ಲಿದ್ರು. ಕೊನೆ ಕೊನೆಗೆ ನನ್ನ ಚಿಕ್ಕವನೇ ಚಿಕ್ಕವನೇ ಅಂತಿದ್ರು, ಛೋಟೇ ಛೋಟೇ ಅಂತಿದ್ರು. ನನಗೆ ಯಾಕೆ ಹೀಗಂತಾರೆ ಅಂತ ಅರ್ಥ ಆಗ್ತಿರ್ಲಿಲ್ಲ. ಎ.ಕೆ.ಸುಬ್ಬಯ್ಯನವರು ಒಂದು ದಿನ ಕೇಳಿದ್ರು "ಏನು ಇಷ್ಟು ಧಾಂಡಿಗನಾಗಿದ್ದಾನೆ ಛೋಟೇ ಛೋಟೇ ಅಂದ್ರೆ ಏನರ್ಥ ಅಂತ". ಆಗ ವಿರೋಧ ಪಕ್ಷದಲ್ಲಿ ಕೂತಿರೋರು ಯಾಕ್ ಹಾಗೆ ಅಂತಾರೆ ಅಂತ ನನಗಂತೂ ಅರ್ಥ ಆಗ್ತಿರಲಿಲ್ಲ. ಅದು ಯಾಕೆ ಹಾಗೆ ಅಂತಿದ್ರೂ ಅಂದ್ರೆ ನಮ್ಮ ಎಸ್. ಚನ್ನಬಸವಯ್ಯನವರಿದ್ದಾರೆ ಇನ್ನೊಬ್ರು ಅವರ ಶಿಷ್ಯಂದಿರು. ಈ ಚನ್ನಬಸವಯ್ಯನವರು ಏನು ಮಾಡೋರು ಅಂದ್ರೆ ಈ ಸಂಘಟನೆ ಮಾಡೋಕೆ ಮೊದಲು ಮೈಸೂರಿನಲ್ಲಿ ಹೆಚ್ಚು ಸಂಪರ್ಕ ಇಟ್ಕೊಂಡಿದ್ರು. ಅವರಿಗೊಬ್ಬ ಮಿತ್ರರು ಇದ್ರು. ಛೋಟೇ ಸಾಬ್ ಅಂತ.

ಬಹುಶಃ ವೆಂಕಟರಾಮ್ ಅವರಿಗೆ ಅವರ ಬಗ್ಗೆ ಚೂರು ವಿಶ್ವಾಸ ಇತ್ತು ಅಂತ ಕಾಣುತ್ತೆ. ಅವರನ್ನ ನೋಡಿದ್ರೆ ನಿನ್ನನ್ನ ನೋಡ್ದಂಗಾಗುತ್ತೆ. ಅದಕ್ಕೆ ನಿನ್ನನ್ನ ಛೋಟೇ ಛೋಟೇ ಅಂತ ಕರೀತೀನೋ ಅಂತಿದ್ರು. ಏಕವಚನದಲ್ಲಿ ಛೋಟೇ ಛೋಟೇ ಅನ್ನೋರು ಕನ್ನಡದಲ್ಲಿ ಚಿಕ್ಕೋನೆ ಚಿಕ್ಕೋನೆ ಅಂತ ಕರೆಯೋರು. ಯಾವುದಾದರೂ ಕಾರ್ಯಕ್ರಮಗಳಿಗೆ ಹೋದಾಗ "ಏ ಆ ಛೋಟೇ ಎಲ್ಲಿ ಹೋದ ಕರೆಯೋ" ಅಂತಿದ್ರು. ಈ ಥರಾ ಆತ್ಮೀಯತೆ ಅವರಲ್ಲಿ ಇತ್ತು. ಎಲ್ಲಕ್ಕಿಂತ ಮಿಗಿಲಾಗಿ ಅವರ ಚಿಂತನೆ. ಈಗ ನಮ್ಮ ರಮೇಶ್ ಬಂದಗದ್ದೆ ಅವರು

ಹೇಳಿದ್ರು ---- ಇವತ್ತಿನ ರಾಜಕಾರಣ ಎಂಥದ್ದಾಗಬೇಕು. ಜನತಾ ಒಂದು ಪ್ರಯೋಗ ಕೇಂದ್ರದಲ್ಲಿ ವೈಫಲ್ಯವನ್ನು ಕಂಡಾಗ ಅವರು ಜನತಾಪಕ್ಷವನ್ನು ಬಿಟ್ರು. ಅವರು ಸ್ವತಂತ್ರ್ಯ ಸದಸ್ಯರಾಗಿದ್ರು ಮೇಲ್ಮನೆಯಲ್ಲಿ. ಅವರ ಚಿಂತನೆಗೆ ಎರಡೇ ಎರಡು ಉದಾಹರಣೆಯನ್ನು ಕೊಡುವುದಾದರೆ ; ಮೊಟ್ಟಮೊದಲನೇ ಬಾರಿಗೆ ಸುಮಾರು ವರ್ಷಗಳ ನಂತರ ಅವರು ಭಾಷಣವನ್ನು ಮಾಡಿರಲಿಲ್ಲ. ಒಮ್ಮೆ ಭಾಷಣವೊಂದನ್ನ ಮಾಡಿದ್ರು ಮೇಲ್ಮನೆಯಲ್ಲಿ. ದೇವರಾಜ್ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ರು. ಆ ಭಾಷಣಕ್ಕೆ ಮುಂಚೆ ನಾವಿಬ್ರೇ ಕುಳಿತು ಬಹಳ ಹೊತ್ತು ಗಂಭೀರವಾಗಿ ಚರ್ಚೆಯನ್ನ ಮಾಡಿದ್ವಿ. ಭೂ ಸುಧಾರಣೆಯ ಬಗ್ಗೆ ನಮ್ಮ ಮತ್ತು ಅವರ ಚಿಂತನೆ ಬೇರೆ ಇದ್ವು. ಅತ್ಯಂತ ಕ್ರಾಂತಿಕಾರಕರವಾದ ಆರ್ಥಿಕ ಕಾರ್ಯಕ್ರಮವಲ್ಲ. ೧೪೮೦೦೦೦ ಎಕರೆ ಕರ್ನಾಟಕದಲ್ಲಿ ಸಾಗುವಳಿ ಆಗ್ತಾ ಇರತಕ್ಕಂಥ ಭೂಮಿ. ಬಹುಶಃ ನಮ್ಮ ಭೂಸುಧಾರಣೆಗೆ ಒಳಪಟ್ಟಿರತಕ್ಕಂಥ ಜಮೀನು ಕೇವಲ ೨೪ ರಿಂದ ೩೨ ಲಕ್ಷ ಎಕರೆ ಜಮೀನಿತ್ತು. ಅಂದರೆ ಅದು ಹೆಚ್ಚುವರಿಯಾಗಿರಬಹುದು ಅಥವಾ ಗೇಣಿಗೆ ಸಂಬಂಧಪಟ್ಟಿದ್ದಾಗಿರಬಹುದು. ೩೭ ಲಕ್ಷ ಅರ್ಜಿಗಳು ನಮ್ಮಲ್ಲಿ ಬಂದ್ವು. ಹೆಚ್ಚು ಕಡಿಮೆ ಏಳರಿಂದ ಎಂಟು ಲಕ್ಷ ಅಂದ್ರೆ ಸ್ವಲ್ಪ ಹೆಚ್ಚು ಕಡಿಮೆ ೩೭೫೬೦೦೦ ಅರ್ಜಿಗಳು ಬಂದಿದ್ವು. ಇದರಲ್ಲಿ ೩೫೦೦೦೦ ಎರಡು ಜಿಲ್ಲೆಗಳಿಗೆ ಸೀಮಿತವಾದದ್ದು. ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆ. ಮತ್ತೆ ಈ ಒಂದು ಆರ್ಥಿಕ ಕಾರ್ಯಕ್ರಮವಾಗಿ ಈ ಸಮಗ್ರತೆಯನ್ನ ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ ಇದು ಅಂಥ ಆರ್ಥಿಕ ಕಾರ್ಯಕ್ರಮವಲ್ಲ. ಆದರೆ ಇದು ಉತ್ತಮ ಸಾಮಾಜಿಕ ಕಾರ್ಯಕ್ರಮ. ಒಂದು ಸಮಾಜ ಜಡ ಸ್ಥಿತಿಯಲ್ಲಿರತಕ್ಕಂಥ ಸಮಾಜಕ್ಕೆ ಪ್ರೇರಣೆ. ಯಾವಾಗಲೂ ಆ ಪ್ರೇರಣೆ ಆರ್ಥಿಕ ರೀತಿಯಲ್ಲೇ ಆರಂಭವಾಗಬೇಕು. ಹಾಗಿದ್ದಾಗ ಮಾತ್ರ ಆ ಪ್ರೇರಣೆ ಒಂದು ಶಾಶ್ವತ ದಿಕ್ಕಿನಲ್ಲಿ ಚಲಿಸುವುದಕ್ಕೆ ಅವಕಾಶ. ಭಾವನಾತ್ಮಕ ಪ್ರೇರಣೆ ಹಾಗಾಗೋದಿಲ್ಲ. ಆ ದೃಷ್ಟಿಯಿಂದಲೇ ಈ ಆರ್ಥಿಕ ಪ್ರೇರಣೆಯನ್ನ ಕೊಟ್ಟದ್ದು. ಒಂದು ಸಾಮಾಜಿಕ ಚಿಂತನೆಗೆ ಯಾವುದು ಶೋಷಿತ ವರ್ಗ ಇದೆ, ಬೆವರಿನ ವರ್ಗ ಇದೆ, ಆ ಬೆವರಿನ ವರ್ಗ ತನ್ನ ಮುಂದಿನ ಸ್ಪಷ್ಟವಾದ ಗುರಿ ಹತ್ತಿರ ಹೋಗಿಲ್ಲ. ಅಸ್ಪಷ್ಟವಾದ ಗುರಿಯಾದ್ರೂ ಕೂಡ ಚಾಲನೆಗೊಳ್ಳಲು ಸಮಾಜದಲ್ಲಿ ಅಷ್ಟರಮಟ್ಟಿಗೆ ಅದಕ್ಕೆ ಹೆಚ್ಚಿನ ಬೆಲೆ ಕೊಡಬಹುದು. ಇದು ನಾವಿಬ್ಬರೂ ಒಪ್ಪಿದ ಸಿದ್ಧಾಂತ.

ಅವತ್ತು ಇದ್ದ ಒಂದು ಮಸೂದೆ ಈ ಭೂಸಹಾಯ ಕಾಯ್ದೆಗೆ ಇದ್ದಂಥ ಒಂದು ಚಿಕ್ಕ ತಿದ್ದುಪಡಿ. ಆ ತಿದ್ದುಪಡಿಯ ಮೇಲೆ ಭಾಷಣ ಮಾಡಿದವರು ಅಂದಿನ ಕಂದಾಯ ಸಚಿವರಾದಂತಹ ಬಸವಲಿಂಗಪ್ಪನವರು. ಬಸವಲಿಂಗಪ್ಪನವರು ಸಭಾನಾಯಕರು ಆಗಿದ್ದವರು. ಭಾಷಣ ಮಾಡುವಾಗ ಹೇಳಿದ್ರು ಜಗತ್ತಿನಲ್ಲೇ ಇಂತಹ ಕ್ರಾಂತಿಯನ್ನ

ಮಾಡಿದಂಥ ಈ ನಾಡಿನ ಆರ್ಥಿಕ ಸಮಾನತೆಯನ್ನ ಸಾಧಿಸಿದ್ದೇವೆ ಅನ್ನತಕ್ಕಂತಹ ಒಂದು ಕಾಂಗ್ರೆಸ್ ಐ ತರಹ ಭಾಷಣವನ್ನ ಮಾಡಿದ್ರು. ಅದು ಕೂಡಲೇ ನಮ್ಮ ಗೆಳೆಯರಿಗೆ ಒಂದು ಪ್ರಚೋದನೆಯಾಯಿತು. ನನ್ನನ್ನ ಕರೆದು ಇದಕ್ಕೆ ನಾನು ಸರಿಯಾದ ಉತ್ತರವನ್ನ ಕೊಡಬೇಕು. ಎಲ್ಲೂ ಹೋಗ್ಬೇಡ ಇಲ್ಲಿ ಕೂತ್ಕೋ. ನಾನು ಅಲ್ಲೇ ಕೂತಿದ್ದೆ. ಅಂದು ಅವರ ಭಾಷಣ ತುಂಬ ಉತ್ತಮವಾದದ್ದು. ನನಗೆ ಸಂಕಟ ಆಗೋದೇನೂ ಅಂದ್ರೆ ವೆಂಕಟರಾಂ ಅವರು ಭಾಷಣ ಮಾಡ್ದಾಗ ಕೊನೇಲೆಲ್ಲೋ ಮೂಲೇಲಿ ಒಂದೆರಡು ಕಾಲಂನಲ್ಲಿ ಬಂದಿತ್ತು ಪತ್ರಿಕೆಗಳಲ್ಲಿ. ಬಹುಶಃ ಇಪ್ಪತ್ತೈದು ಮೂವತ್ತು ವರ್ಷಗಳ ವಾಗ್ಮಯವನ್ನ ನೋಡಿದ್ರೆ ಅಂತಹ ವೈಶಾಲ್ಯಪೂರ್ವಕ ಭಾಷಣ ಮೇಲ್ಮನೆಯಲ್ಲಿ ಆದದ್ದು ಅಪರೂಪ. ಅವರು ಹೇಳಿದ ಸಾರ ಇಷ್ಟು. ಸನ್ಮಾನ್ಯ ಬಸವಲಿಂಗಪ್ಪನವರೆ ನಿಮ್ಮ ವಿಚಾರಕ್ಕೆ, ನಿಮ್ಮ ಉತ್ಸಾಹಕ್ಕೆ ನಾನು ತಣ್ಣೀರೆರಚೋಲ್ಲ. ಕೆಲವು ಅಂಕಿ ಅಂಶಗಳು ನಿಮ್ಮ ಸರ್ಕಾರ ನನ್ನ ಮುಂದೆ ಇಟ್ಟಿರೋದನ್ನ ನಿಮ್ಮ ಮುಂದೆ ಇಡ್ತೇನೆ. ಈ ದೇಶದ ಬಡತನದ ಬಗ್ಗೆ ಈ ದೇಶದ ಸಾಮಾಜಿಕ ತುಡಿತಕ್ಕೆ ಅಥವಾ ಆರ್ಥಿಕ ತುಳಿತಕ್ಕೆ ಸಿಕ್ಕಿರುವ ವರ್ಗದ ಬಗ್ಗೆ ತಾವು ನನಗೆ ಹೇಳ್ಬೇಕು ಅಂತ.

ಅವರು ಕೇಳಿದ ಮೊದಲ ಪ್ರಶ್ನೆ : ಈ ದೇಶದಲ್ಲಿ ಉಪಯೋಗಿಸುವ ನೇಗಿಲು. ಕರ್ನಾಟಕ ರಾಜ್ಯದಲ್ಲಿ ಇರತಕ್ಕಂತಹ ನೇಗಿಲುಗಳ ಸಂಖ್ಯೆಗಳನ್ನ ಅವರ ಮುಂದೆ ಇಟ್ಟರು. ಸುಮಾರು ಶೇ. ೭೨ ರಿಂದ ೭೮ರವರೆಗೆ. ತಾವು ಈ ಹೊತ್ತು ಭಾಷಣ ಮಾಡುವ ಮಂತ್ರಿಗಳೇ ಶೇ. ೭೨ರಿಂದ ೭೮ರ ಹೊರಗೆ ಈ ಒಂದು ಚಿಕ್ಕ ಸಾಧನ ಏನಿದೆ; ಅತ್ಯಂತ ಬಡವ ಈ ದೇಶ ತನ್ನ ಉತ್ಪಾದನೆಯ ಕ್ಷೇತ್ರದಲ್ಲಿ ಉಪಯೋಗಿಸತಕ್ಕಂತಹದ್ದು. ಈ ಐದು ಸಾವಿರ ವರ್ಷಗಳಿಂದ ಬಂದ ಈ ತಂತ್ರಜ್ಞಾನವನ್ನ ಎಷ್ಟರಮಟ್ಟಿಗೆ ಸುಧಾರಿಸಿದ್ದೀರಿ? ಒಂದು ಉದಾಹರಣೆಯನ್ನ ಹೇಳಿದ್ರು. ಸುಮಾರು ಶೇ.೭ ರಷ್ಟು ಮಾತ್ರ ಹೊಸ ಸಾಧನಗಳನ್ನ ಈ ವರ್ಗಕ್ಕೆ ಒದಗಿಸಿದ್ದೀರಿ. ೯೩ರಷ್ಟು ಸಾಧನಗಳನ್ನು ಸಾವಿರ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಸಂಪ್ರದಾಯದಿಂದ ಪಡೆದಿರತಕ್ಕಂತಹ ಸಾಧನಗಳು. ಯಾವಾಗ ಈ ಏಳರಷ್ಟು ಸಾಧನವನ್ನ ಒದಗಿಸಿ ಒಂದು ಉತ್ಪಾದನೆಯಲ್ಲಿ ಒಂದು ಕೊಂಚವಾದರೂ ಅವನ ಸಾಧನದಲ್ಲಿ ಹೆಚ್ಚು ಮಾಡಕೊಳ್ಳತಕ್ಕಂಥ ವ್ಯವಸ್ಥೆಯನ್ನೇ ಮಾಡದೆ ನಿಮ್ಮ ವಿಚಾರಧಾರೆ ಅಥವ ನಿಮ್ಮ ವ್ಯವಸ್ಥೆ ಅಥವ ಸರ್ಕಾರ ನಿಮ್ಮ ಪಕ್ಷ ಈ ದೇಶದಲ್ಲಿ ಸಮಾಜವಾದವನ್ನ ಬಡತನವನ್ನ ತ್ಯಜಿಸ್ತೀರಾ ಅನ್ನತಕ್ಕಂತಹ ಒಂದು ವಾದವನ್ನು ಇಟ್ಟಿದ್ದರು.

ಆ ದಿಶೆಯಲ್ಲೇ ಅವರನ್ನ ಅದರ ಬಗ್ಗೆ ನಾನೊಮ್ಮೆ ಕೇಳ್ದೆ. ಅವರು ಲೇಖನಗಳನ್ನ ಬರೆದ್ರು. ನಾನು ಹೇಳ್ದೆ ತಾವು ಹೇಳಿದ್ದು ಸರಿ ಇಲ್ಲ ಇದು ಅಂತ. ಇವತ್ತು ಅದು ಸಾಧ್ಯವಾಗೋದಿಲ್ಲ ಒಂದೇ ಮಾತ್ನಲ್ಲಿ ಅವರು ಹೇಳಿದ್ರು. ಇದು ಮುಂದಿನ ಭವಿಷ್ಯತ್‌ಗಾಗಿ

ನಾನು ಹೇಳ್ತಾ ಇಲ್ಲ.   ಇನ್ನು ಇಪ್ಪತ್ತು ವರ್ಷದಲ್ಲಿ ಅಥವ ಐವತ್ತು ವರ್ಷದಲ್ಲಿ ಒಂದು ಸಮಾಜವಾದಿ ಸಮಾಜವನ್ನ ನಿರ್ಮಾಣ ಮಾಡಲಿಕ್ಕೆ ಈ ವ್ಯವಸ್ಥೆಯನ್ನ ನಾನು ಹೇಳ್ತಾ ಇಲ್ಲ. ಮತ್ತೆ ಇನ್ಯಾವ ವ್ಯವಸ್ಥೆಗಾಗಿ ನೀವು ಹೇಳ್ತಾ ಇದ್ದೀರಿ? ಅಂತ ಕೇಳ್ದಾಗ ಇವತ್ತು ಭಾರತ ಅಪಾಯದಲ್ಲಿದೆ. ಭಾರತದ ಸಮಗ್ರತೆ ಅಪಾಯದಲ್ಲಿದೆ. ಭಾರತದ ಜನತಂತ್ರದಲ್ಲಿ ಅಪಾಯ ಬರತಕ್ಕಂಥ ಪರಿಸ್ಥಿತಿಯಿದೆ. ಇಂತಹ ಒಂದು ಸಂದರ್ಭದಲ್ಲಿ ಕೊನೆಯ ಐದು ಹತ್ತು ವರ್ಷಗಳ ಕಾಲ, ಸ್ಥಳೀಯ ಆಶೋತ್ತರಗಳಿಗೆ ಪ್ರಚೋದನೆಗೊಳಿಸತಕ್ಕಂತಹ ಶಕ್ತಿಗಳು ಹುಟ್ಟಲು ಸಾಧ್ಯವಿದೆ. ಆ ದೃಷ್ಟಿಯಿಂದ ಇಂಥ ಒಂದು ವ್ಯವಸ್ಥೆ ಐದು ಹತ್ತು ವರ್ಷಗಳಾದ್ರೂ ದೇಶದಲ್ಲಿ ಬರಬೇಕಾಗುತ್ತದೆ. ಇಲ್ಲಾಂದ್ರೆ ಸಮಗ್ರತೆಯನ್ನ ಕಳಕೊಳ್ಳುತ್ತೇವೆ. ಬಹುಶಃ ಅದರ ಆಧಾರವನ್ನ ಇಟ್ಟುಕೊಂಡು ಇವತ್ತು ಪಂಜಾಬಿನ ಪ್ರಶ್ನೆಯನ್ನ ಪೂರ್ವಾಂಚಲದ ಪ್ರಶ್ನೆಯನ್ನ ನಾವು ವಿಚಾರ ಮಾಡ್ಬೇಕಾಗುತ್ತೆ.
ಅಂದು ಗೆಳೆಯ ವೆಂಕಟರಾಮ್ ಅವರು ಚಿಂತನೆ ಮಾಡಿದ ಸಮಗ್ರತೆಯ ಬಗ್ಗೆ ಇವತ್ತು ನಾವು ಚಿಂತನೆ ಮಾಡ್ಬೇಕಾಗ್ತದೆ. ಶ್ರೀಮತಿ ಇಂದಿರಾ ಗಾಂಧಿ ಏನಾದ್ರೂ ಮುಂದಿನ ಚುನಾವಣೆಗೆ ಹೋಗ್ಬೇಕಾಗಿದ್ರೆ ಅವರಿಗೆಲ್ಲ ಈಗಿನ ಘೋಷಣೆಗಳು ವೈಫಲ್ಯವನ್ನ ಕಂಡಿದೆ. ಗರೀಬಿ ಹಠಾವೊ ಘೋಷಣೆಯಿಲ್ಲ ಅಥವಾ ಕೆಲಸ ಮಾಡುವ ಸರ್ಕಾರ ಘೋಷಣೆಯಿಲ್ಲ. ಅದರ ವೈಫಲ್ಯದ ರಾಜಕಾರಣ ಬೇಡ. ಆದರೆ ಮುಂದಿನ ಚುನಾವಣೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿ ಈ ದೇಶದಲ್ಲಿ ಹೋಗ್ಬೇಕಾಗಿದ್ರೆ ಎರಡು ತಂತ್ರ ಅವರ ಮನಸ್ಸಿನಲ್ಲಿ ಇದೆ.

ಒಂದು ಮುಂದೆ ಅವರು ಹೋಗ್ಬೇಕಾಗಿರತಕ್ಕಂಥ ಘನತೆ ಈ ದೇಶದ ಸಮಗ್ರತೆಯನ್ನ ಉಳಿಸಬೇಕಾಗಿರತಕ್ಕಂಥದ್ದು. ಈ ಸಮಗ್ರತೆಯನ್ನ ಉಳಿಸಬೇಕಾಗಿರೋರು ಯಾರು ? ಒಂದು ಇಂದಿರಾ ಗಾಂದಿಯವರು ಈ ವಿಷಯನ್ನ ವಿಶಾಲ ಚೌಕಟ್ಟಿನಲ್ಲಿ ಅರ್ಥಮಾಡಿಕೊಳ್ಳಬೇಕು. ಇವತ್ತು ಇದರಿಂದ ಆರ್ಥಿಕ ಮತ್ತು ಬಡತನದ ಸಮಸ್ಯೆಗಳು ಹೆಚ್ಚಾಗಿದೆ. ಮಿಜೋಃರಾಂನ ನಾಲ್ಕು ಲಕ್ಷಜನರನ್ನ ಹತೋಟಿಯಲ್ಲಿಡವ ಶ್ರೀಮತಿ ಇಂದಿರಾಗಾಂಧಿ ಐವತ್ತು ಸಾವಿರ ಸ್ಯೆನ್ಯವನ್ನ ಹತ್ತು ವರ್ಷದಿಂದ ಅಲ್ಲಿ ಕಾವಲಿಟ್ಟಿದ್ದಾರೆ. ಹೀಗೆ ಇಡೀ ಪೂರ್ವಾಂಚಲದಲ್ಲಿ ಇಪ್ಪತ್ತೆರಡು ಲಕ್ಷ ಜನರ ಕಾವಲಿಗಾಗಿ ಎರಡು ಲಕ್ಷ ಸ್ಯೆನ್ಯ ಅಲ್ಲಿ ಕಾವಲಿದೆ.

ಇದರ ಪರಿಣಾಮ ರಾಜಕೀಯ ಪ್ರಕ್ರಿಯೆ ನಿಂತು, ಸ್ಯೆನ್ಯ ಅಲ್ಲಿಗೆ ಹೋಗಿ ಜನತಂತ್ರ ಅಲ್ಲಿಗೆ ಕುಸಿದುಬಿದ್ದಿತ್ತು. ಅಲ್ಲಿ ಯಾರ ಮೇಲೆ ಸಂಶಯ ಬಂದರೂ ಗುಂಡಿಕ್ಕಿ ಕೊಲ್ಲಬಹುದಾಗಿತ್ತು. ಇದನ್ನು ಕೇಳುವ ಹಕ್ಕು ಯಾರಿಗೂ ಇರ್ಲಿಲ್ಲ. ಅಂದರೆ ನಾವು ರಾಜಕೀಯದಿಂದಾಗುವ ಪ್ರಕ್ರಿಯೆಯನ್ನ ಮಿಲಿಟರಿಗೆ ಒಳಪಡಿಸುತ್ತಿದ್ದೇವೆ. ಇದೇ ಇವತ್ತಿನ ದೇಶದ ಭಯಂಕರ ಪರಿಸ್ಥಿತಿ. ದೇಶವನ್ನ ಪ್ರೀತಿಸುವ ಪ್ರತಿಯೊಬ್ಬರೂ ಇದರ ಬಗ್ಗೆ ಚಿಂತನೆ

ಮಾಡಬೇಕಾಗುತ್ತದೆ. ಇಂದಿರಾಗಾಂಧಿ ತನ್ನ ಅಧಿಕಾರ ಉಳಿವಿಗಾಗಿ ಈ ದೇಶವನ್ನ ಆಪತ್ತಿಗೆ ಹಾಕಲು, ಹಿಮದೆ ಮುಂದೆ ನೋಡದೆ ಕೀಳುಮಟ್ಟದ ರಾಜಕಾರಣವನ್ನ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದಲೇ ಈ ದೇಶದ ಆರ್ಥಿಕ ವ್ಯವಸ್ಥೆಯ ಬಗ್ಗೆ ಲೋಹಿಯಾರವರ ಚಿಂತನೆಯನ್ನ ಮಾಡಬೇಕು. ಹೊರವಲಯದಲ್ಲಿ ನಾವು ಸಮಾನತೆಯನ್ನ ಕಾಣಬೇಕಾದರೆ ಅದನ್ನು ಮೊದಲು ಒಳವಲಯದಲ್ಲಿ ಕಾಣಬೇಕು. ವೆಂಕಟರಾಂ ಅವರು ಹೇಳಿರುವ ವಿಚಾರಧಾರೆಯನ್ನ ಇಟ್ಟು ನಾವು ಮುಂದೆ ವಿಚಾರವನ್ನ ಮಾಡಬೇಕು. ನಾವು ಕಾರ್ಮಿಕರ ಬಗ್ಗೆ ಮಾತ್ನಾಡ್ತೇವೆ. ಎಲ್ಲಿಗೆ ಹೋಗಿದೆ ಇವತ್ತು ಕಾರ್ಮಿಕರ ಚಳುವಳಿ ಈ ನಾಡಿನಲ್ಲಿ? ಕಾರ್ಮಿಕರ ಚಳುವಳಿ ಕೇವಲ ತಮ್ಮ ಆರ್ಥಿಕ ಬೆಳವಣಿಗೆಗೆ ಹೋರಾಟ ಮಾಡುತ್ತಿದೆ. ಯಾರು ನಾವು ಕಾರ್ಮಿಕರ ಬಗ್ಗೆ ಚಿಂತನೆ ಮಾಡ್ತಿದ್ದೇವೆ ಸಮಗ್ರತೆ ಮತ್ತು ಆರ್ಥಿಕದ ಬಗ್ಗೆ ನಾವು ಚಿಂತನೆಯನ್ನ ಮಾಡ್ಬೇಕಾಗಿದೆ. ಈ ನಾಡಿನಲ್ಲಿ ಸಮಾಜವಾದ ನಿರ್ಮಾಣ ಮಾಡ್ಬೇಕು ಅಂತ ಹೇಳಿದ್ರೆ ಈ ಟಾಟಾ ಮತ್ತು ಬಾಟಾ ಇವರಿಬ್ಬರ ಮಧ್ಯೆ ಸಾಮ್ಯತೆಯನ್ನ ತರಬೇಕಾಗ್ತದೆ.

ಇವತ್ತು ಭಾರತದಲ್ಲಿ ಅಮೇರಿಕಾದ ಉತ್ಪಾದನೆ ಮತ್ತು ರಾಷ್ಯದ ಉತ್ಪಾದನೆ ಕ್ರಮ ವ್ಯವಸಾಯವನ್ನಾಧರಿಸಿದೆ. ಈ ದೇಶದ ನಿರುದ್ಯೋಗ ಸಮಸ್ಯೆಗೆ ಟಾಟಾ ಬಾಟಾ ಅಲ್ಲ ಚಮಾರ ಕಮ್ಮಾರನ ಅಗತ್ಯವಿದೆ. ಈ ಒಂದು ಚಿಂತನೆಯಲ್ಲೇ ನಾವು ಮುಂದೆ ಸಾಗಬೇಕಾಗುತ್ತದೆ. ಇದಕ್ಕೆ ಮೂಲವಾಗಿದ್ದವರು ನಮ್ಮ ವೆಂಕಟರಾಂ ಅವರು. ಕರ್ನಾಟಕದಲ್ಲಿ ಅನೇಕ ಗೆಳೆಯರನ್ನ ತಂದುಕೊಟ್ಟವರು ಅವರು. ಈ ಸಮಸ್ಯೆಗೆ ಒಂದು ಚೌಕಟ್ಟು ಇದೆ. ಅದು ವೆಂಕಟರಾಮ್ ಅವರು ಹಾಕಿಕೊಟ್ಟಂತಹ ಚೌಕಟ್ಟು. ಇವೆಲ್ಲಕ್ಕೂ ವೆಂಕಟ್‌ರಾಮ್ ಅವರೇ ಪ್ರೇರಣೆ.